ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 26-02-1995.

# *ಸಂಗಮಯುಗ ಉತ್ಸವದ ಯುಗವಾಗಿದೆ ಉತ್ಸವವನ್ನು ಆಚರಿಸುವುದು ಎಂದರೆ ಅವಿನಾಶಿ ಉತ್ಸಾಹ, ಉತ್ಸಾಹದಲ್ಲಿ ಇರುವುದಾಗಿದೆ.*

(संगमयुग उत्सव का युग है उत्सव मनाना अर्थात् अविनाशी उमंग–उत्साह में रहना)

ಇಂದು ತ್ರಿದೇವ ರಚಯಿತ ತ್ರಿಮೂರ್ತಿ ಶಿವ ತಂದೆಯು ತನ್ನ ಆತ್ಮಿಕ ವಜ್ರಗಳೊಂದಿಗೆ ಡೈಮಂಡ್ ಜುಬಿಲಿ ಅಥವಾ ಡೈಮಂಡ್ ಜಯಂತಿಯನ್ನಾಚರಿಸಲು ಬಂದಿದ್ದಾರೆ. ಇದೇ ವಿಚಿತ್ರ ಜಯಂತಿಯನ್ನೇ ಡೈಮಂಡ್ ಜಯಂತಿಯೆಂದು ಹೇಳುತ್ತಾರೆ. ಏಕೆಂದರೆ ತಂದೆಯು ಕವಡೆಯ ಸಮಾನವಿರುವ ಆತ್ಮರನ್ನು ವಜ್ರ ಸಮಾನರನ್ನಾಗಿ ಮಾಡುವುದಕ್ಕಾಗಿಯೇ ಅವತರಣೆಯಾಗುತ್ತಾರೆ. ಈ ಅದ್ಭುತವಾದ ಜಯಂತಿಯೇ ಇಡೀ ಕಲ್ಪದಲ್ಲಿ, ಇಡೀ ವಿಶ್ವದಲ್ಲಿ ಎಲ್ಲದಕ್ಕಿಂತಲೂ ಅತೀತ ಮತ್ತು ಪ್ರಿಯವಾದದ್ದು. *ಯಾರಾದರೂ ಜಯಂತಿಯನ್ನು ಆಚರಿಸಿದರೆ ಆತ್ಮರ ಜಯಂತಿ ಅಥವಾ ದೇಹಧಾರಿಗಳ ಜಯಂತಿಯನ್ನು ಆಚರಿಸುತ್ತಾರೆ. ಆದರೆ ಈ ಶಿವಜಯಂತಿ ಶರೀರಧಾರಿ ಆತ್ಮರದಲ್ಲ ನಿರಾಕಾರ ಬಿಂದುರೂಪನ ಜಯಂತಿ, ಶಿವಜಯಂತಿ ಅಂದಾಕ್ಷಣ ಜ್ಯೋತಿರ್ಬಿಂದು ರೂಪವೇ ಎದುರಿಗೆ ಬರುತ್ತದೆ ಆದ್ದರಿಂದ ಇಡೀ ಕಲ್ಪದಲ್ಲಿ ಯಾವಾಗಲೂ ಅವಿನಾಶಿ ಪರಮಾತ್ಮನ ಜಯಂತಿ ಆಚರಿಸುವುದಿಲ್ಲ. ಅಶರೀರಿಯಾದ ತ್ರಿಮೂರ್ತಿ ಶಿವತಂದೆಯ ಜಯಂತಿ ವಿಚಿತ್ರವಾದದು ಮತ್ತು ಈ ಶಿವ ಜಯಂತಿಯೇ ತಂದೆ ಮತ್ತು ಮಕ್ಕಳು ಇಬ್ಬರ ಜಯಂತಿ. ಇಂದು ಕೇವಲ ತಂದೆಯ ಜಯಂತಿಯನ್ನೇ ಆಚರಿಸಲು ಬಂದಿದ್ದೀರಾ ಅಥವಾ ಬ್ರಾಹ್ಮಣತ್ಮರ ಜಯಂತಿಯನ್ನು ಕೂಡ ಆಚರಿಸಲು ಬಂದಿದ್ದೀರಾ? ಎಲ್ಲರಿಗೆ ಹೇಳುತ್ತೀರಲ್ಲವೇ ಶಿವ ಜಯಂತಿಯೇ ತ್ರಿಮೂರ್ತಿ ಜಯಂತಿ, ಬ್ರಾಹ್ಮಣರ ಜಯಂತಿ.* ಪರಮಾತ್ಮ ತಂದೆಯೊಂದಿಗೆ ಇಷ್ಟು ಜನ ಆತ್ಮರ ಜಯಂತಿ ಎಂದರೆ ಇದು ವಿಚಿತ್ರವೇ ತಾನೇ! ಲೌಕಿಕದಲ್ಲಿ ಆದರೆ ತಂದೆಯ ಜನ್ಮದಿನ ಮತ್ತು ಮಕ್ಕಳ ಜನ್ಮದಿನ ಒಂದೇ ಇರುವುದಿಲ್ಲ, ದಿನವೊಂದೇ ಆದರೂ ವರ್ಷವು ಬೇರೆಯಾಗಿರುತ್ತದೆ. ವಿಚಿತ್ರ ಜಯಂತಿ ಅತೀತವಾದ ಮತ್ತು ಪ್ರಿಯವಾದ ಜಯಂತಿಯನ್ನು ಆಚರಿಸಿಕೊಳ್ಳಲು ಎಲ್ಲೆಲ್ಲಿಂದ ಬಂದಿದ್ದೀರಿ? ವಿಶ್ವದ ಮೂಲೆ ಮೂಲೆಯಿಂದ ಏಕೆ ಬಂದಿದ್ದೀರಿ? ನಿಮ್ಮ ಜಯಂತಿಯನ್ನು ಆಚರಿಸಿಕೊಳ್ಳಲು ಬಂದಿದ್ದೀರಾ ಅಥವಾ ತಂದೆಯ ಜಯಂತಿಯನ್ನು ಆಚರಿಸಿಕೊಳ್ಳಲು ಬಂದಿದ್ದೀರಾ ಅಥವಾ ಇಬ್ಬರ ಜಯಂತಿಯನ್ನು ಆಚರಿಸಲು ಬಂದಿದ್ದೀರಾ? ನೀವು ತಂದೆಗೆ ಶುಭಾಶಯಗಳು ಕೊಡುತ್ತೀರಾ ಅಥವಾ ತಂದೆ ನಿಮಗೆ ಶುಭಾಶಯಗಳು ಕೊಡುತ್ತಾರೆಯೇ? ನೀವು ತಂದೆಗೆ ಶುಭಾಶಯಗಳು ಎಂದು ಹೇಳುತ್ತಿದ್ದೀರಿ ಮತ್ತು ತಂದೆ ನಿಮಗೆ ಪದಮಾಪದಮ್ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಒಬ್ಬೊಬ್ಬ ಬ್ರಾಹ್ಮಣತ್ಮ ವಜ್ರಕ್ಕಿಂತಲೂ ಅಮೂಲ್ಯವಾದದು. ಆದ್ದರಿಂದ ತಂದೆ ವಜ್ರತುಲ್ಯ ಎಂದು ಹೇಳುತ್ತಾರೆ ಆದರೆ ನಿಮ್ಮ ಮೌಲ್ಯದ ಮುಂದೆ ವಜ್ರ ಎಷ್ಟು? ಏನು ಅಲ್ಲ. ಈ ವಜ್ರಗಳಾದರೆ ನಿಮ್ಮ ಮಹಲ್ ನ ಗೋಡೆಯಲ್ಲಿ ಇರುತ್ತವೆ . ಒಂದೊಂದು ಬ್ರಾಹ್ಮಣಾತ್ಮ ವಜ್ರಕಿಂತಲೂ ಜಾಸ್ತಿ.

ಬಾಪ್‌ದಾದಾರವರು ನಾಲ್ಕೂ ಕಡೆಯಲ್ಲಿರುವ ವಜ್ರಕ್ಕಿಂತಲೂ ಅಮೂಲ್ಯವಾದ ಎಲ್ಲಾ ಮಕ್ಕಳನ್ನು ಸನ್ಮುಖದಲ್ಲಿ ನೋಡುತ್ತಿದ್ದಾರೆ. ಬಾಪ್‌ದಾದಾರವರ ಮುಂದೆ ಕೇವಲ ಮಧುಬನದ ಸಭೆಯಲ್ಲ ಆದರೆ ವಿಶ್ವದ ನಾಲ್ಕೂ ಕಡೆಯಲ್ಲಿರುವ ಬ್ರಾಹ್ಮಣ ಮಕ್ಕಳ ಸಭೆಯಿದೆ. ಎಲ್ಲರ ಹೃದಯ ಶುಭಾಷಯಗಳ ಸ್ನೇಹತುಂಬಿರುವ ಹಾಡೆಂದಾದರೂ ಹೇಳಿ, ಶಬ್ದಗಳೆಂದಾದರೂ ಹೇಳಿರಿ, ತಂದೆಯವರು ಸಮೀಪದಿಂದ ಆಲಿಸುತ್ತಿದ್ದಾರೆ. ಹೃದಯದ ಧ್ವನಿಯು ಹೃದಯರಾಮನ ಬಳಿ ಮುಂಚೆಯೇ ತಲುಪುತ್ತದೆ. ಆದ್ದರಿಂದ ಬಾಪ್‌ದಾದಾರವರು ನೋಡುತ್ತಿದ್ದಾರೆ- ಮಕ್ಕಳ ಸೇವೆಯ ಪ್ರತ್ಯಕ್ಷ ಪ್ರಮಾಣವು ನಾಲ್ಕೂ ಕಡೆಗಳಿಂದ ಮಧುಬನ, ತಂದೆಯವರ ಮಧುರ ಮನೆಯವರೆಗೂ ತಲುಪುತ್ತಿದೆ. ಹಾಗೆ ನೋಡಿದಾಗ ಶಿವಜಯಂತಿಯನ್ನು ಉತ್ಸವವೆಂದು ಹೇಳುತ್ತಾರೆ. ಯಥಾರ್ಥ ಉತ್ಸವವನ್ನಂತು ತಾವು ಬ್ರಾಹ್ಮಣರೇ ಆಚರಿಸುತ್ತೀರಿ ಏಕೆಂದರೆ ಉತ್ಸವದ ಅರ್ಥವಾಗಿದೆ- ಸರ್ವರು ಉತ್ಸಾಹ, ಉಲ್ಲಾಸದಲ್ಲಿರುವುದು. ಯಾರೆಲ್ಲಾರೂ ಇಲ್ಲಿ ಕುಳಿತಿರುವಿರೋ ಎಲ್ಲರ ಹೃದಯದಲ್ಲಿಯೂ ಉತ್ಸಾಹ, ಉಲ್ಲಾಸವು ಎಷ್ಟಿದೆ? ಅವಿನಾಶಿಯಾಗಿರುವುದು ಇದೆಯೇ ಅಥವಾ ಈ ಒಂದು ದಿನಕ್ಕಾಗಿ ಇದೆಯೇ? ಅವಿನಾಶಿಯಾದುದು ಇದೆಯಲ್ಲವೆ? ಆದ್ದರಿಂದ ಈ ಶ್ರೇಷ್ಠವಾದ ಸಂಗಮಯುಗವನ್ನು ಬಾಪ್‌ದಾದಾರವರು ಉತ್ಸವದ ಯುಗವೆಂದು ಹೇಳುತ್ತಾರೆ. ತಮಗಾಗಿ ಪ್ರತಿನಿತ್ಯವೂ ಉತ್ಸವದಿಂದ ಕೂಡಿರುತ್ತದೆ. ಪ್ರತಿನಿತ್ಯವೂ ಉತ್ಸವವಾಗಿರುತ್ತದೆ.

'ಅನೇಕತೆಯಲ್ಲಿ ಏಕತೆ' ಎಂಬ ಗಾಯನವನ್ನೇನು ತಾವು ಟಾಪಿಕ್ ಆಗಿಡುತ್ತೀರಿ. ಅದನ್ನು ಪ್ರತ್ಯಕ್ಷದಲ್ಲಿ ಅನೇಕ ದೇಶ, ಅನೇಕ ಭಾಷೆಗಳು, ಅನೇಕ ರೂಪ-ರಂಗಿದೆ ಆದರೆ ಅನೇಕತೆಯಲ್ಲಿಯೂ ಎಲ್ಲರ ಹೃದಯದಲ್ಲಿ ಏಕತೆಯಿದೆಯಲ್ಲವೆ. ಏಕೆಂದರೆ ಒಬ್ಬ ತಂದೆಯಿದ್ದಾರೆ. ಭಲೆ ಅಮೇರಿಕಾದಿಂದ ಬಂದಿರಬಹುದು, ಆಫ್ರಿಕಾದಿಂದ ಬಂದಿರಬಹುದು ಆದರೆ ಹೃದಯದಲ್ಲಿ ಒಬ್ಬ ತಂದೆಯಿದ್ದಾರೆ. ಒಬ್ಬರ ಶ್ರೀಮತದಂತೆ ನಡೆಯುವವರಾಗಿದ್ದೀರಿ, ಅನೇಕ ಭಾಷೆಗಳಲ್ಲಿ ಇರುತ್ತಿದ್ದರೂ ಮನಸ್ಸಿನ ಹಾಡು. ಮನಸ್ಸಿನ ಭಾಷೆಯಂತು ಒಂದೇ ಆಗಿದೆ. ಭಲೆ ಯಾವುದೇ ಭಾಷೆಯವರಾಗಿರಬಹುದು, ಕಪ್ಪು ಕಿರೀಟವಂತು ಸಿಕ್ಕಿರುತ್ತದೆ(ಎಲ್ಲರೂ ಹೆಡ್ ಫೋನ್ ಹಾಕಿಕೊಂಡು ತಮ್ಮ-ತಮ್ಮ ಭಾಷೆಗಳಲ್ಲಿ ಕೇಳಿಸಿಕೊಳ್ಳುತ್ತಿದ್ದಾರೆ). ಈಗ ಇದೇ ಕಪ್ಪು ಕಿರೀಟವು ಪರಿವರ್ತನೆಯಾಗಿ ಚೆನ್ನದ್ದಾಗಿಬಿಡುತ್ತದೆ. ಆದರೆ ಎಲ್ಲರ ಮನಸ್ಸಿನ ಭಾಷೆಯು ಒಂದೇ ಆಗಿದೆ ಹಾಗೂ ಒಂದೇ ಶಬ್ಧವಾಗಿದೆ- 'ನನ್ನ ಬಾಬಾ', ಎಲ್ಲಾ ಭಾಷೆಯವರು 'ಮೇರಾ ಬಾಬಾ' ಎಂದು ಹೇಳಿರಿ. ಇದೊಂದೇ ಅನೇಕತೆಯಲ್ಲಿ ಏಕತೆಯಾಗಿದೆ ಅಲ್ಲವೆ'

ಹಾಗಾದರೆ ಉತ್ಸಾಹದಲ್ಲಿರುವವರು ಅರ್ಥಾತ್ ಸದಾ ಉತ್ಸವವನ್ನು ಆಚರಿಸುವಂತಹ ಶ್ರೇಷ್ಠ ಆತ್ಮರಾಗಿದ್ದೀರಿ. ಎಂದಿಗೂ ಇದನ್ನು ಕಡಿಮೆ ಮಾಡಿಕೊಳ್ಳಬಾರದು. ಮುಂಚೆಯೂ ತಿಳಿಸಿದ್ದೆವು- ಬ್ರಾಹ್ಮಣ ಜೀವನದ ಶ್ವಾಸವು ಉತ್ಸಾಹ, ಉಲ್ಲಾಸವಾಗಿದೆ. ಒಂದುವೇಳೆ ಶ್ವಾಸ ಹೋದರೆ ಸೆಕೆಂಡಿನಲ್ಲಿ ಜೀವನವು ಸಮಾಪ್ತಿ ಆಗಿಬಿಡುತ್ತದೆ ಅಲ್ಲವೆ. ಹಾಗೆಯೇ ಬ್ರಾಹ್ಮಣ ಜೀವನದಲ್ಲೇನಾದರೂ ಉತ್ಸಾಹ, ಉಲ್ಲಾಸದ ಶ್ವಾಸವಿಲ್ಲದಿದ್ದರೆ ಬ್ರಾಹ್ಮಣ ಜೀವನವೇ ಇಲ್ಲ. ಯಾರು ಸದಾ ಉತ್ಸಾಹ, ಉಲ್ಲಾಸದಲ್ಲಿರುತ್ತಾರೆಯೋ ಅವರು ನಶೆಯಿಂದ ಹೇಳುತ್ತಾರೆ- ಬ್ರಾಹ್ಮಣ ಜೀವನವಿರುವುದೇ ಉತ್ಸಾಹ,

ಉಲ್ಲಾಸಕ್ಕಾಗಿ ಹಾಗೂ ಯಾರಲ್ಲಿ ಉತ್ಸಾಹ, ಉಲ್ಲಾಸವು ಕಡಿಮೆಯಾಗುತ್ತದೆಯೋ ಅವರ ಮಾತೂ ಸಹ ಬದಲಾಗಿಬಿಡುತ್ತದೆ. ಅವರಂತು ಹೇಳುತ್ತಾರೆ- ನಾವಿರುವುದಂತು ಸರಿ... ಆಗಬೇಕು.... ಆಗಿಬಿಡುತ್ತದೆ.... ಈ ಭಾಷೆ ಹಾಗೂ ಆ ಭಾಷೆಯಲ್ಲಿ ಅಂತರವೆಷ್ಟಿದೆ! ಅವರ ಪ್ರತೀ ಮಾತಿನಲ್ಲಿಯೂ 'ಆದರೆ' ಆಗಬೇಕು- ಆಗಬೇಕಾಗಿದೆ.... ಅನ್ನುವುದು ಅವಶ್ಯವಾಗಿ ಇರುತ್ತದೆ ಅಂದಮೇಲೆ ಈ ಆದರೆ ಅನ್ನುವುದೇನಿರುತ್ತದೆಯೋ ಅದು ಉತ್ಸಾಹ, ಉಲ್ಲಾಸದ ಶಕ್ತಿಯು ಕಡಿಮೆಯಾಗುವುದರಿಂದಲೇ ಇಂತಹ ಮಾತು, ಬಲಹೀನತೆಯ ಮಾತುಗಳು ಹೊರಬರುತ್ತದೆ. ಆದ್ದರಿಂದ ಎಂದಿಗೂ ಉತ್ಸಾಹ, ಉಲ್ಲಾಸವು ಕಡಿಮೆ ಆಗಬಾರದು. ಏಕೆ ಕಡಿಮೆಯಾಗುತ್ತದೆ? ಬಾಪ್‌ದಾದಾರವರು ಹೇಳುತ್ತಾರೆ- ಸದಾ ವಾಹ್-ವಾಹ್ ಎನ್ನಿರಿ ಎಂದು ಹೇಳಿದರೂ ವೈ- ವೈ (ಏಕೆ-ಏಕೆ) ಎನ್ನುತ್ತಿರುತ್ತಾರೆ. ಒಂದುವೇಳೆ ಯಾವುದೇ ಪರಿಸ್ಥಿತಿಯಲ್ಲಿ ವೈ ಶಬ್ಧವು ಬಂದುಬಿಟ್ಟರೆ ಉತ್ಸಾಹ, ಉಲ್ಲಾಸದ ಶಕ್ತಿಯೇ ಕಡಿಮೆಯಾಗಿಬಿಡುತ್ತದೆ. ಹಿಂದಿನ ವರ್ಷವೂ ವಿಶೇಷವಾಗಿ ಡಬಲ್ ವಿದೇಶಿಗಳಿಗಾಗಿ ಬಾಪ್‌ದಾದಾರವರು ಹೇಳಿದ್ದರು. ವೈ(ಏಕೆ) ಶಬ್ದವನ್ನು ಬ್ರಾಹ್ಮಣರ ಶಬ್ದಕೋಶದಲ್ಲಿ ಪರಿವರ್ತನೆ ಮಾಡಿರಿ, ಯಾವಾಗ ವೈ ಶಬ್ಧವು ಬರುತ್ತದೆಯೋ ಆಗ ಫ್ಲೈ ಶಬ್ಧವನ್ನು ನೆನಪು ಮಾಡಿಕೊಂಡರೆ ಏಕೆ ಎಂಬ ಶಬ್ದವು ಸಮಾಪ್ತಿ ಆಗಿಬಿಡುತ್ತದೆ. ಯಾವಾಗ ಯಾವುದೇ ಚಿಕ್ಕ ಪರಿಸ್ಥಿತಿಯೂ ಸಹ ದೊಡ್ಡದಾಗಿಬಿಡುತ್ತದೆಯೋ ಆಗ ಇದೇಕೆ, ಇದೇನು, ಹೀಗೆ ವೈ ಶಬ್ದವು ಬರುತ್ತದೆ. ಆಗ ಹಾರಿಬಿಟ್ಟರೆ(ಫ್ಲೈ) ಮಾಡಿಬಿಟ್ಟರೆ ಪರಿಸ್ಥಿತಿಯೇನಾಗುವುದು? ಚಿಕ್ಕದಾದ ಆಟಿಕೆಯಾಗುವುದು. ಆದ್ದರಿಂದ ಯಾವಾಗಲೆಲ್ಲಾ ಮನಸ್ಸಿನಲ್ಲಿ ವೈ ಶಬ್ಧವು ಬರುತ್ತದೆಯೋ ಆಗ ಹೇಳಿರಿ- ಬ್ರಾಹ್ಮಣ ಶಬ್ದಕೋಶದಲ್ಲಿ ವೈ ಶಬ್ದವಿಲ್ಲ, ಫ್ಲೈ ಎನ್ನುವುದಿದೆ ಏಕೆಂದರೆ ವೈ-ವೈ, ಅಯ್ಯೋ- ಅಯ್ಯೋ ಎನ್ನುವಂತೆ ಮಾಡಿಬಿಡುತ್ತದೆ. ಬಾಪ್‌ದಾದಾರವರಿಗೆ ನಗೂ ಸಹ ಬರುತ್ತದೆ- ಒಂದುಕಡೆ ಹೇಳುತ್ತಾರೆ- ನಮ್ಮಂತಹ ಶ್ರೇಷ್ಠವಾದ ಭಾಗ್ಯವು ಮತ್ಯಾರದೂ ಇಲ್ಲಎಂದು. ಈಗೀಗ ಹೇಳಿ ಮತ್ತೆ ಈಗೀಗ ಉತ್ಸಾಹವು ಕಡಿಮೆಯಾಗಿಬಿಟ್ಟಾಗ ಹೇಳುತ್ತಾರೆ- ಗೊತ್ತಿಲ್ಲ. ನನ್ನ ಭಾಗ್ಯವೇ ಹೀಗಿದೆಯೇನೋ! ನನ್ನ ಭಾಗ್ಯದಲ್ಲಿ ಇಷ್ಟೇ ಇದೆ! ಎಂದು. ಅಯ್ಯೋ- ಅಯ್ಯೋ ಎಂದ ಹಾಗಾಯಿತಲ್ಲವೇ. ಯಾವಾಗ ಅಯ್ಯೋ-ಅಯ್ಯೋ ಎಂಬ ದೃಶ್ಯಾವಳಿ ಬರುತ್ತದೆಯೋ ಆಗ ವಾಹ್ ವಾಹ್ ಎಂದರೆ ದೃಶ್ಯವೇ ಬದಲಾಗಿಬಿಡುತ್ತದೆ ಹಾಗೂ ತಾವೂ ಬದಲಾಗಿಬಿಡುತ್ತೀರಿ.

ಡಬಲ್ ವಿದೇಶಿಗಳಂತು ಇತ್ತೀಚೆಗೆ 'ಪಾಸಿಟೀವ್ ಥಿಂಕಿಂಗ್'ನ ಕೋರ್ಸ್ ಮಾಡಿಸುತ್ತೀರಲ್ಲವೆ. ಎಲ್ಲಾ ವಿದೇಶಗಳಲ್ಲಿಯೂ ವಿಶೇಷವಾಗಿ ಈ ಕೋರ್ಸ್‌ನ್ನು ಮಾಡಿಸುತ್ತೀರಾ? ಹಾಗಾದರೆ ತಮಗೂ ಕೋರ್ಸ್ ಮಾಡಿಸುತ್ತೀರಾ ಅಥವಾ ಅನ್ಯರಿಗೆ ಮಾತ್ರ ಮಾಡಿಸುವಿರಾ? ಯಾವಾಗ ಯಾವುದೇ ಸಮಯದಲ್ಲಿ ಅಂತಹ ಪರಿಸ್ಥಿತಿಯು ಬಂದಿತೆಂದರೆ ತಮ್ಮನ್ನೇ ವಿದ್ಯಾರ್ಥಿಯನ್ನಾಗಿ ಮಾಡಿಕೊಂಡು, ತಾವೇ ಶಿಕ್ಷಕರನ್ನಾಗಿ ಮಾಡಿಕೊಂಡು, ತಮಗೇ ಈ ಕೋರ್ಸ್ ಮಾಡಿಸಿರಿ. ತಮಗೆ ಮಾಡಿಸುವುದಕ್ಕೆ ಸಾಧ್ಯವಿದೆಯೋ ಅಥವಾ ಕೇವಲ ಅನ್ಯರಿಗಷ್ಟೇ ಮಾಡಿಸಬಹುದೇ? ಅನ್ಯರಿಗೆ ಮಾಡಿಸುವುದಂತು ಸಹಜವಿದೆ. ಯಾವಾಗ ಪ್ರತೀ ವ್ಯಕ್ತಿಯನ್ನು, ಮಾತನ್ನು ಸಕಾರಾತ್ಮಕ ವೃತ್ತಿಯಿಂದ ನೋಡುವ, ಕೇಳುವ ಅಥವಾ ಚಿಂತನೆ ಮಾಡುವುದು ಸ್ವಾಭಾವಿಕ ಸ್ಥಿತಿಯಾಗಿಬಿಡುತ್ತದೆಯೋ ಆಗ ಎಂತಹ ಸ್ಥಿತಿಯಿರುತ್ತದೆ? ವರ್ತಮಾನದ ವಿಜ್ಞಾನದ ಮೂಲಕವೂ ಇಂತಹ ಸಾಧನಗಳು ತಯಾರಾಗಿವೆ. ಅದು ತ್ಯಾಜ್ಯ ವಸ್ತುಗಳನ್ನೂ ಬಹಳ ಸುಂದರ ರೂಪದಲ್ಲಿ ಬದಲಾಯಿಸಿಬಿಡುತ್ತದೆ. ಹೇಗಿರುವುದನ್ನು ಹೇಗೆ ಮಾಡಿಬಿಡುತ್ತಾರೆ! ಎನ್ನುವುದನ್ನು ನೋಡಿದ್ದೀರಲ್ಲವೆ ಅಂದಮೇಲೆ ತಮ್ಮ

ವೃತ್ತಿಯನ್ನೂ ಈ ರೀತಿ ಪರಿವರ್ತನೆ ಮಾಡಿಕೊಳ್ಳಲು ಸಾಧ್ಯವಿಲ್ಲವೇ? ಭಲೆ ನಕಾರಾತ್ಮಕವಾಗಿಯೇ ಬರಲಿ ಆದರೆ ತಾವು ಅದನ್ನು ಸಕಾರಾತ್ಮಕ ವೃತ್ತಿಯಿಂದ ಬದಲಾಯಿಸಿಬಿಡಿ. ಒಂದುವೇಳೆ ಏರುಪೇರಿನಲ್ಲಿ ಬಂದರೂ ಸಹ ಅದಕ್ಕೆ ಕಾರಣವಿದೆ- ನಕಾರಾತ್ಮಕವಾಗಿ ಆಲಿಸುವುದು, ಚಿಂತನೆ ಮಾಡುವುದು, ಮಾತನಾಡುವುದು ಅಥವಾ ಮಾಡುವುದು. ಇದಕ್ಕಾಗಿ ಈ ಮಾದರಿಯನ್ನೂ ಮಾಡುತ್ತೀರಲ್ಲವೆ- ಕೇಳಬಾರದು, ನೋಡಬಾರದು. ಮಾತನಾಡಬಾರದು. ಮಾಡಬಾರದು. ಶಾಂತಿಯ ಶಕ್ತಿಯು ನಕಾರಾತ್ಮಕವನ್ನೂ ಸಕಾರಾತ್ಮಕದಲ್ಲಿ ಪರಿವರ್ತನೆ ಮಾಡಲು ಸಾಧ್ಯವಿಲ್ಲವೇನು! ತಮ್ಮ ಮನಸ್ಸು ಹಾಗೂ ಬುದ್ಧಿಯು ಹೇಗಾಗಬೇಕೆಂದರೆ ನಕಾರಾತ್ಮಕತೆಯನ್ನೂ ಟಚ್ ಮಾಡಬಾರದು, ಸೆಕೆಂಡಿನಲ್ಲಿ ಪರಿವರ್ತನೆ ಆಗಬೇಕು. ಇಷ್ಟು ತೀವ್ರಗತಿಯ ಅನುಭೂತಿ ಮಾಡಲು ಸಾಧ್ಯವೇ? ಮನಸ್ಸು-ಬುದ್ಧಿಯು ಇಷ್ಟು ತೀವ್ರಗತಿಯಿರುವ ಯಂತ್ರವಾಗಿಬಿಡಲಿ. ಆಗಬಹುದೇ ಅಥವಾ ಸಮಯ ತೆಗೆದುಕೊಳ್ಳುವುದೇ? ಅಥವಾ ನಕಾರಾತ್ಮಕ ಮಾತುಗಳು ಬಂದಾಗ ಸ್ವಲ್ಪ ಯೋಚಿಸುವುದಕ್ಕೆ ಬಿಡಿ, ಸರಿಯಾದದೇನು ನೋಡುತ್ತೇವೆ! ಎಂದು ಹೇಳುತ್ತೀರಾ? ಬಹಳ ತೀವ್ರಗತಿಯಿಂದ ಪರಿವರ್ತನೆ ಆಗಿಬಿಡುವುದಕ್ಕೆ ಹೇಳಲಾಗುತ್ತದೆ- ಬ್ರಾಹ್ಮಣ ಜೀವನದ ಮಜಾ. ಮೋಜು, ಒಂದುವೇಳೆ ಬದುಕಬೇಕೆಂದರೆ ಮೋಜಿನಿಂದ ಬದುಕಬೇಕು. ಚಿಂತನೆ-ಯೋಚನೆಯಿರುವ ಜೀವನವು ಜೀವನವೇ ಅಲ್ಲ. ತಾವು ಅನ್ಯರಿಗೂ ಹೇಳುತ್ತೀರಿ- ರಾಜಯೋಗವು ಜೀವನದ ಕಲೆಯಾಗಿದೆ ಅಂದಮೇಲೆ ತಾವುಗಳು ರಾಜಯೋಗಿ ಜೀವನದವರು ಆಗಿದ್ದೀರಲ್ಲವೆ! ಅಥವಾ ಕೇವಲ ಹೇಳುವವರೇ ಆಗಿದ್ದೀರಾ? ಯಾವಾಗ ರಾಜಯೋಗವು ಜೀವನದ ಕಲೆಯಾಗಿದೆ ಅಂದಮೇಲೆ ರಾಜಯೋಗಿಗಳ ಕಲೆಯೇನಾಗಿದೆ? ಇದೇ ಆಗಿರುತ್ತದೆ ಅಲ್ಲವೇ? ಹಾಗಾದರೆ ಉತ್ಸವವನ್ನಾಚರಿಸುವುದು ಅರ್ಥಾತ್ ಮೋಜಿನಲ್ಲಿರುವುದು. ಮನಸ್ಸೂ ಮೋಜಿನಲ್ಲಿರಲಿ, ತನುವೂ ಹಾಗೂ ಸಂಬಂಧ-ಸಂಪರ್ಕವೂ ಮೋಜಿನಲ್ಲಿರುವುದೇ ಉತ್ಸವವನ್ನಾಚರಿಸುವುದು ಆಗಿದೆ.

ಕೆಲವು ಮಕ್ಕಳು ಹೇಳುತ್ತಾರೆ- ನಮ್ಮೊಂದಿಗೆ ನಾವು ಚೆನ್ನಾಗಿರುತ್ತಿದ್ದೇವೆ. ನಾವು ಮಜಾದಲ್ಲಿಯೇ ಇರುತ್ತಿದ್ದೇವೆ, ಸಂಬಂಧ ಸಂಪರ್ಕದಲ್ಲಿ ಆಗಾಗ ಮಾತ್ರ ಮಜಾದಲ್ಲಿ ಇರುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಸಂಬಂಧ ಸಂಪರ್ಕಗಳೇ ನಮ್ಮ ಸ್ಥಿತಿಗೆ ಪರೀಕ್ಷೆಯಾಗಿವೆ. ನಾನಂತು ಪಾಸ್-ವಿತ್-ಆನರ್ ಆಗುವೆನು ಎಂದು ವಿದ್ಯಾರ್ಥಿ ಹೇಳುತ್ತಾನೆ ಆದರೆ ಪರೀಕ್ಷೆಯ ಸಮಯದಲ್ಲಿ ಅಂಕಗಳು ಕಡಿಮೆಯಾದರೆ ಇದಕ್ಕೇನು ಹೇಳುವುದು? ಈ ರೀತಿಯಂತು ಆಗುವುದಿಲ್ಲ ಅಲ್ಲವೇ! ಸಂಪೂರ್ಣವಾಗಿ ತೇರ್ಗಡೆ ಆಗುವವರಲ್ಲವೇ! ಬಾಪ್‌ದಾದಾರವರು ತಿಳಿಸಿದ್ದಾರೆ- ಸದಾ ತಂದೆಯ ಬಳಿ ಯಾರಿರುತ್ತಾರೆಯೋ ಅವರು ಉತ್ತೀರ್ಣರಾಗುತ್ತಾರೆ. ಸಮೀಪದಲ್ಲಿ ಇರದಿದ್ದರೆ ಉತ್ತೀರ್ಣರಾಗುವುದಿಲ್ಲ. ಹಾಗಾದರೆ ಸದಾ ಎಲ್ಲಿರುತ್ತಿರಿ? ದೂರವಿರುತ್ತಿರಾ, ಸಮೀಪದಲ್ಲಿ ಇರುವುದಿಲ್ಲವೇ? ಡಬಲ್ ವಿದೇಶಿಗಳಂತೂ ಡಬಲ್ ಸಮೀಪದಲ್ಲಿ ಇರಬೇಕಲ್ಲವೇ, ಒಳ್ಳೆಯದು.

ಹಾಗಾದರೆ ಡಬಲ್ ವಿದೇಶಿಯರು ಈ ಬಾರಿ ಹೈ ಜಂಪ್ ಮಾಡಬೇಕಾಗಿದೆ ಮಧುಬನಕ್ಕಂತೂ ಹೈ ಜಂಪ್ ಮಾಡಿಕೊಂಡು ತಲುಪಿದ್ದೀರಿ. (ಈ ಬಾರಿಯೂ ಪ್ರತೀ ವರ್ಷಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಡಬಲ್ ವಿದೇಶಿಯರು ತಲುಪಿದ್ದಾರೆ) ಒಳ್ಳೆಯದು, ಡಬಲ್ ವಿದೇಶಿಯರಿಗೂ ಹಲವರಿಗೆ ಪಟ್ಟದ ರಾಣಿಯರಾಗುವ ಒಳ್ಳೆಯ ಅವಕಾಶ ಸಿಕ್ಕಿದೆ.

ಪಟ್ಟದ ರಾಣಿಯರಾಗುವುದರಲ್ಲಿ ಮಜಾ ಇದೆಯೇ ಅಥವಾ ಇಲ್ಲವೇ? ತಮ್ಮ ಲಗೇಜ್ ಇಷ್ಟು ದೊಡ್ಡದಿದೆ, ಆದರಲ್ಲಿಯೇ ಮಲಗಬಹುದು ಏಕೆಂದರೆ ಒಂದು ದೊಡ್ಡದಾದನ್ನು ತರುತ್ತಾರೆ, ಒಂದು ಚಿಕ್ಕದಾಗಿರುವುದನ್ನು ತರುತ್ತಾರೆ ಹಾಗಾದರೆ ಚಿಕ್ಕದನ್ನು ದಿಂಬನ್ನಾಗಿ ಮಾಡಿಕೊಳ್ಳಲಿ. ಸ್ಥಾನವೂ ಉಳಿತಾಯವಾಗುತ್ತದೆ ದೊಡ್ಡ-ದೊಡ್ಡ ಲಗೇಜನ್ನು ಎಳೆದುಕೊಂಡು ತರುತ್ತಿರುವ ದೃಶ್ಯವನ್ನು ಬಾಪ್‌ದಾದಾರವರು ನೋಡುತ್ತಾರೆ. ಚೆನ್ನಾಗಿದೆ. ಒಳ್ಳೆಯ ದೃಶ್ಯವೆನಿಸುತ್ತದೆ ಅಲ್ಲವೇ! ಸಂಗಮಯುಗದಲ್ಲಿ ಈ ಪರಿಶ್ರಮವೂ ಸ್ವಲ್ಪ ಸಮಯದ್ದಾಗಿದೆ. ನಂತರ ಈ ಪ್ರಕೃತಿಯೂ ತಮ್ಮ ದಾಸಿಯಾಗಿಬಿಡುತ್ತದೆ. ಹಾಗಾದರೆ ದಾಸಿಗಳೂ ಬಹಳಷ್ಟಾಗುತ್ತಾರೆ. ನಂತರ ಸಾಮಗ್ರಿಯನ್ನು ಎತ್ತುವ ಅವಶ್ಯಕತೆಯಿರುವುದಿಲ್ಲ. ಈಗ ತಮ್ಮ ರಾಜ್ಯ ಸ್ಥಾಪನೆ ಆಗುತ್ತದೆ. ಈ ಸಮಯದಲ್ಲಿ ಗುಪ್ತವೇಷದಲ್ಲಿ ಇದ್ದೀರಿ. ಸೇವಾಧಾರಿ ಆಗಿದ್ದೀರಿ ನಂತರ ರಾಜ್ಯ ಅಧಿಕಾರಿ ಆಗುವಿರಿ. ಹಾಗಾದರೆ ಸೇವಾಧಾರಿಗಳಂತು ಎಲ್ಲಾ ಪ್ರಕಾರದ ಸೇವೆಯನ್ನು ಮಾಡಬೇಕಾಗುತ್ತದೆ. ಈಗೆಷ್ಟು ತನು, ಮನ, ಧನ ಹಾಗೂ ಸಂಪರ್ಕದಿಂದ ಸೇವೆ ಮಾಡುತ್ತೀರೋ ಅಷ್ಟೇ ಅಲ್ಲಿಯೂ ಸೇವಾಧಾರಿಗಳು ಸಿಗುವರು. ಎಲ್ಲದಕ್ಕೂ ಮೊದಲು ಈ ಪ್ರಕೃತಿಯ ಐದು ತತ್ವಗಳು ತಮ್ಮ ಸೇವಾಧಾರಿ ಆಗುತ್ತವೆ. ತಮ್ಮ ರಾಜ್ಯ-ಭಾಗ್ಯವು ಸ್ಮೃತಿಯಲ್ಲಿ ಇದೆಯಲ್ಲವೆ! ಎಷ್ಟುಬಾರಿ ರಾಜ್ಯಾಧಿಕಾರಿ ಆಗಿದ್ದೀರಿ! ಲೆಕ್ಕವಿಲ್ಲದಷ್ಟು ಬಾರಿ ಆಗಿದ್ದೀರಿ ಹಾಗೂ ಆಗುತ್ತಾ ಇರುತ್ತೀರಿ ಆದರೆ ರಾಜ್ಯಾಧಿಕಾರಿಗಿಂತಲೂ ಈಗಿನ ಸೇವಾಧಾರಿಯ ಜೀವನವು ಶ್ರೇಷ್ಠವಾದುದು. ಏಕೆಂದರೆ ಈಗ ತಂದೆ ಹಾಗೂ ಮಕ್ಕಳ ಜೊತೆ(ಸಂಗ) ಇದೆ. ಭಲೆ ಯಾವುದೇ ಪ್ರಕಾರದ ಸೇವೆಯೇ ಆಗಿರಲಿ ಆದರೆ ಸೇವೆಯ ಪ್ರತ್ಯಕ್ಷಫಲ ಈಗಲೇ ಸಿಗುತ್ತದೆ. ತಂದೆಯ ಸ್ನೇಹ, ಸಹಯೋಗ ಹಾಗೂ ತಂದೆಯವರ ಮೂಲಕ ಪ್ರಾಪ್ತಿಯಾಗಿರುವ ಖಜಾನೆಗಳು ಪ್ರತ್ಯಕ್ಷಫಲದ ರೂಪದಲ್ಲಿ ಸಿಗುತ್ತದೆ. ಯಾವಾಗ ಯಾವುದೇ ವಿಶೇಷವಾದ ಸೇವೆಯನ್ನು ಮಾಡುತ್ತೀರಿ ಹಾಗೂ ಯುಕ್ತಿಯುಕ್ತವಾಗಿ ಸೇವೆಯನ್ನು ಮಾಡುತ್ತೀರೆಂದರೆ ಎಷ್ಟೊಂದು ಖುಷಿಯಾಗುವುದು! ಆ ಸಮಯದ ತಮ್ಮ ಚಹರೆಯ ಭಾವಚಿತ್ರವನ್ನು ತೆಗೆದುಕೊಂಡರೆ ಹೇಗಿರುತ್ತದೆ! ಒಂದುಕಡೆ ಸೇವೆ ಮಾಡುತ್ತೀರಿ. ಇನ್ನೊಂದು ಕಡೆ ತಮಗಾಗಿಯೇ ಪ್ರತ್ಯಕ್ಷಫಲವು ಸದಾ ತಯಾರಾಗಿ ಇರುತ್ತದೆ. ಒಂದು ಕೈಯಿಂದ ಸೇವೆ ಮಾಡಿರಿ. ಇನ್ನೊಂದು ಕೈಯಿಂದ ಫಲವನ್ನು ಅನುಭವಿಸುವ ಅನುಭವವಾಗುವುದೇ? ಅಥವಾ ಸೇವೆಯಲ್ಲಿ ಬಹಳ ಪರಿಶ್ರಮವಿದೆಯೇ? ಸೇವೆಯಲ್ಲಿ ಏರುಪೇರಾಗುತ್ತದೆಯೇ ಅಥವಾ ಇಲ್ಲವೇ? ಕೆಲಕೆಲವೊಮ್ಮೆ ಆಗುತ್ತದೆ. ಈ ಏರುಪೇರುಗಳೇ ಹೊರಸಂಚಾರ ಮಾಡಿಸುತ್ತದೆ, ಅನುಭವಿಯನ್ನಾಗಿ ಮಾಡುತ್ತದೆ. ಯಾರು ಕೇವಲ ವರ್ತಮಾನವನ್ನು ನೋಡುತ್ತೀರೋ ಅವರು ಏರುಪೇರುಗಳಲ್ಲಿ ಬರುತ್ತೀರಿ. ಆದರೆ ವರ್ತಮಾನದಲ್ಲಿ ಅಡಕವಾಗಿರುವ ಭವಿಷ್ಯವೇನಿದೆಯೋ ಅದು ಸ್ಪಷ್ಟವಾಗಿ ಕಾಣಿಸುವುದಿಲ್ಲ ಆದ್ದರಿಂದಲೇ ಏರುಪೇರಿನಲ್ಲಿ ಬಂದುಬಿಡುತ್ತೀರಿ. ಯಾವುದೇ ಅತಿದೊಡ್ಡ ಸೂಕ್ಷ್ಮ ವಾದ ಪರಿಸ್ಥಿತಿಯೇ ಆಗಿರಲಿ, ಅದು ವಾಸ್ತವದಲ್ಲಿ ಮುಂದುವರೆಯುವುದಕ್ಕಾಗಿ ಬಹಳ ದೊಡ್ಡ ಪಾಠವನ್ನು ಓದಿಸುತ್ತದೆ. ಪರಿಸ್ಥಿತಿಯೆನಿಸುವುದಿಲ್ಲ ಆದರೆ ಅದು ತಮ್ಮ ಶಿಕ್ಷಕನಾಗಿದೆ. ಈ ಪರಿಸ್ಥಿತಿಯು ನನಗೆ ಯಾವ ಪಾಠವನ್ನು ಓದಿಸಿತು? ಈ ದೃಷ್ಟಿಯಿಂದ ನೋಡುವುದಕ್ಕೇ ನಕಾರಾತ್ಮಕವನ್ನು ಸಕಾರಾತ್ಮಕದಲ್ಲಿ ಪರಿವರ್ತನೆ ಮಾಡುವುದು ಎಂದು ಹೇಳಲಾಗುತ್ತದೆ. ಕೇವಲ ಪರಿಸ್ಥಿತಿಯನ್ನೇ ನೋಡಿದಾಗ ಗಾಬರಿಯಾಗುತ್ತೀರಿ ಮತ್ತು ಪರಿಸ್ಥಿತಿಯು ಮಾಯೆಯ ಮೂಲಕ ಸದಾ ಹೊಸ-ಹೊಸ ರೂಪದಲ್ಲಿ ಬರುತ್ತದೆ. ಸಾಮಾನ್ಯ ರೂಪದಲ್ಲಿ ಬರುವುದಿಲ್ಲ, ಯಾವ ರೂಪದಲ್ಲಿ ಈ ಮುಂಚೆ ಬಂದಿರುತ್ತದೆಯೋ ಹಾಗೆ ಬರುವುದಿಲ್ಲ. ಹೊಸ ರೂಪದಲ್ಲಿ ಬರುತ್ತದೆ. ಆಗ ಅದರಲ್ಲಿ ಇದಂತೂ ಹೊಸ ಮಾತಾಗಿದೆ.

ಇದಂತು ಆಗಬಾರದು. ಇದಂತು ಆಗಬಾರದಿತ್ತು ಎಂದು ಗಾಬರಿಯಾಗುತ್ತೀರಿ. ಆದರೆ ತಿಳಿದುಕೊಳ್ಳಿರಿ- ಮಾಯೆಯು ಅಂತಿಮದವರೆಗೂ ಬಹುರೂಪಿಯಾಗಿ ಬಹುರೂಪವನ್ನು ತೋರಿಸುತ್ತದೆ. ಮಾಯೆಗೆ ಬಹುರೂಪಿಯಾಗುವುದು ಬಹಳ ಬೇಗ ಹಾಗೂ ಬಹಳ ಚೆನ್ನಾಗಿಯೇ ಬರುತ್ತದೆ. ಹೇಗೆ ತಮ್ಮ ಸ್ಥಿತಿಯಿರುತ್ತದೆಯೋ ಹಾಗೆಯೇ ಪರಿಸ್ಥಿತಿಯನ್ನು ತಯಾರು ಮಾಡಿ ಬರುತ್ತದೆ. ಉದಾ: ಇಂದು ತಾವು ಸ್ವಲ್ಪ ಹುಡುಗಾಟಿಕೆಯ ಜೀವನದಲ್ಲಿ ಇದ್ದೀರೆಂದರೆ, ಮಾಯೆಯೂ ಅದೇ ಹುಡುಗಾಟಿಕೆಯ ಪರಿಸ್ಥಿತಿಯ ರೂಪದಲ್ಲಿ ಬರುತ್ತದೆ. ಇಂದು ಮೂಡ್ ಸ್ವಲ್ಪ ಆಫ್ ಆಗಿದೆ, ಹೇಗಿರಬೇಕೋ ಹಾಗಿಲ್ಲದಿದ್ದರೆ ಮೂಡ್ ಆಫ್‌ನ ಪರಿಸ್ಥಿತಿಯ ರೂಪದಲ್ಲಿ ಬರುತ್ತದೆ. ನಂತರ ಯೋಚಿಸುತ್ತೀರಿ- ನಾನು ಮುಂಚೆಯೇ ಯೋಚಿಸುತ್ತಿದ್ದೆನು. ಇದೇನಾಯಿತು? ಆದ್ದರಿಂದ ಮಾಯೆಯನ್ನು ತಿಳಿದುಕೊಳ್ಳಲು, ನೋಡುವುದಕ್ಕಾಗಿ ತ್ರಿಕಾಲದರ್ಶಿ ಹಾಗೂ ತ್ರಿನೇತ್ರಿಯಾಗಿರಿ. ಹಿಂದೆ-ಮುಂದೆ-ಸನ್ಮುಖದ ಮುಂದೆ-ಸನ್ಮುಖದಲ್ಲಿ ತ್ರಿನೇತ್ರಿ ಆಗಿರಬೇಕು.

ತಾವೆಲ್ಲರೂ ತ್ರಿನೇತ್ರಿ ಹಾಗೂ ತ್ರಿಕಾಲದರ್ಶಿ ಆಗಿದ್ದೀರಲ್ಲವೇ? ಡಬಲ್ ವಿದೇಶಿಗಳು ತ್ರಿಕಾಲದರ್ಶಿ ಆಗಿದ್ದಾರೆಯೇ- ಹೌದು ಅಥವಾ ಇಲ್ಲವೇ? ಎಲ್ಲರೂ ಹೇಳಿರಿ. (ಹಾಂಜಿ) ತಮ್ಮ ಭಾಷೆಯಿಂದ ಇದಂತು ಚೆನ್ನಾಗಿ ಹೇಳುತ್ತಿರಿ. ಎಲ್ಲರೂ ಖುಷಿಯಾಗಿದ್ದೀರಾ? (ಹಾಂಜಿ) ಇಷ್ಟು ದೊಡ್ಡ ಸಂಘಟನೆಯಲ್ಲಿ ಮಜಾ ಬರುತ್ತಿದೆಯೇ? (ಹಾಂ ಜಿ) ಕೆಲ-ಕೆಲವರು ಇದಂತು ಯೋಚಿಸುವುದಿಲ್ಲವೆ- ಮುಂದಿನ ವರ್ಷ ಇಷ್ಟೊಂದು ರಶ್ ನಲ್ಲಿ ಬರುವುದಿಲ್ಲ. ಸ್ವಲ್ಪ ಮುಂಚೆಯೇ ಬರಬೇಕು? ಸಂಘಟನೆಯ ಮಜಾ ಸಹ ಪ್ರಿಯವಾಗಿದೆ. ಹಾಗೆ ನೋಡಿದಾಗ ಬರುವುದಂತು ಕಾರ್ಯಕ್ರಮದನುಸಾರವೇ ಬರುತ್ತಾರೆ. ಹೆಚ್ಚಾಗಿ ಬರಬಾರದು ಆದರೆ ಹವ್ಯಾಸವೂ ಹೀಗಿರಬೇಕು, ಹೊಂದಿಕೊಂಡು ಹೋಗಲು ಸಾಧ್ಯವಾಗಬೇಕು. ಈ ಶಕ್ತಿಯು ಸದಾ ತಮ್ಮನ್ನು ವಿಜಯಿಗಳನ್ನಾಗಿ ಮಾಡಿಬಿಡುತ್ತದೆ. ಬ್ರಹ್ಮಾ ತಂದೆಯವರನ್ನು ನೋಡಿದಾಗ ಚಿಕ್ಕವರೊಂದಿಗೆ ಚಿಕ್ಕವರಾಗಿ ಹೊಂದಿಕೊಳ್ಳುತ್ತಿದ್ದರು. ದೊಡ್ಡವರೊಂದಿಗೆ ದೊಡ್ಡವರಾಗಿ ಹೊಂದಿಕೊಳ್ಳುತ್ತಿದ್ದರು. ಭಲೆ ಬೀದಿ ಜೀವನವಿರಬಹುದು, ಸಾಧನಗಳಿರುವ ಜೀವನವಿರಬಹುದು, ಎರಡರಲ್ಲಿಯೂ ಹೊಂದಿಕೊಳ್ಳುವುದು ಹಾಗೂ ಖುಷಿ-ಖುಷಿಯಿಂದ ಹೊಂದಿಕೊಳ್ಳಬೇಕು. ಚಿಂತನೆ ಮಾಡಿ ಅಲ್ಲ. ಇಲ್ಲಿ ದುಃಖಿಗಳಂತು ಆಗುವುದಿಲ್ಲ ಆದರೆ ಸ್ವಲ್ಪ ಖುಷಿಗೆ ಬದಲಾಗಿ ಯೋಚಿಸುವುದರಲ್ಲಿ ತೊಡಗಿಬಿಡುತ್ತೀರಿ- ಇದೇನಾಯಿತು. ಹೇಗಾಯಿತು..... ಹೀಗೆ ಯೋಚಿಸುವವರಿಗೆ ಹೊಂದಿಕೊಳ್ಳುವುದರಲ್ಲಿ ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ತಮ್ಮನ್ನು ಪರಿಶೀಲನೆ ಮಾಡಿಕೊಳ್ಳಿರಿ- ಎಂತಹ ಪರಿಸ್ಥಿತಿಯೇ ಇರಲಿ, ಅದು ಒಳ್ಳೆಯದೇ ಆಗಿರಲಿ ಅಥವಾ ತಮ್ಮ ಸ್ಥಿತಿಯನ್ನು ಏರುಪೇರು ಮಾಡುವುದೇ ಆಗಿರಲಿ ಆದರೆ ಪ್ರತೀ ಸಮಯ. ಪ್ರತಿಯೊಂದು ಸಂದರ್ಭದಲ್ಲಿಯೂ ತಮ್ಮನ್ನು ಹೊಂದಿಕೊಂಡು ಮಾಡಲು ಸಾಧ್ಯವೇ? ಡಬಲ್ ವಿದೇಶಿಗಳಿಗೆ ಒಂಟಿಯಾಗಿರುವುದು ಪ್ರಿಯವೆನಿಸುತ್ತದೆ ಮತ್ತು ಸಂಗಾತ್ಯವೂ ಬಹಳ ಪ್ರಿಯವೆನಿಸುತ್ತದೆ ಆದರೆ ಸಂಗದಲ್ಲಿರಬಹುದು ಅಥವಾ ಒಂಟಿಯಾಗಿರಬಹುದು. ಎರಡರಲ್ಲಿಯೂ ಹೊಂದಿಕೊಳ್ಳುವುದೇ ಬ್ರಾಹ್ಮಣ ಜೀವನವಾಗಿದೆ. ಸಂಘಟನೆಯಿದ್ದರೆ ಬಹಳ ತಲೆ ಕೆಡುತ್ತದೆ. ನನಗೆ ಏಕಾಂತವಿರಬೇಕು, ಈ ಗಲಾಟೆಯಿರಬಾರದು. ನಾನು ಒಂಟಿಯಾಗಿರಬೇಕು...... ಹೀಗಿರಬಾರದು. ಮನಸ್ಸು ಒಂಟಿ ಅರ್ಥಾತ್ ಬಾಹರ್ಮುಖತೆಯಿಂದ ಅಂತರ್ಮುಖತೆಯಲ್ಲಿ ಹೋಗುವುದೇ ಒಂಟಿತನವಾಗಿದೆ. ಕೆಲಕೆಲವರು ಹೇಳುವರಲ್ಲವೆ- ಒಂದು ಕೋಣೆ ಇರಬೇಕು. ಅದರಲ್ಲಿ ಇಬ್ಬರೂ ಇರಬಾರದು. ಒಬ್ಬರಿಗೇ

ಸಿಕ್ಕರೂ ಮೋಜಿನಿಂದ ಮಲಗಿರಿ ಅಥವಾ ಹತ್ತು ಮಂದಿಯ ಮಧ್ಯ ಮಲಗಿದರೂ ಮೋಜಿನಿಂದ ಮಲಗಿರಿ. ವಿದೇಶಿಗಳು ಹತ್ತು ಮಂದಿಯ ಮಧ್ಯೆ ಮಲಗಬಹುದೇ ಅಥವಾ ಪರಿಶ್ರಮವೇ? ಮಲಗಬಹುದಾ? (ಹೌದು) ಒಳ್ಳೆಯದು- ಮುಂದಿನ ವರ್ಷದಲ್ಲಿ 20-20 ಮಂದಿಯನ್ನು ಮಲಗಿಸಲಾಗುವುದು. ಸಮಯವು ಬದಲಾಗುತ್ತದೆ ಹಾಗೂ ಬದಲಾಗುತ್ತಾ ಇರುತ್ತದೆ. ಪ್ರಪಂಚದವರ ಸ್ಥಿತಿಯು ಸೂಕ್ಷ್ಮವಾಗುತ್ತಿದೆ. ಇನ್ನೂ ಆಗುವುದು, ಆಗಲೇಬೇಕು. ಈಗ ಕೇವಲ ಒಂದು ಸ್ಥಾನವೇ ಬೇರ್ಪಡುತ್ತಿದೆ. ಕೊನೆಗಂತೂ ಎಲ್ಲಾ ಕಡೆಯಿಂದ ಒಂದಾಗಬೇಕು ಅಂದಮೇಲೆ ನಾಜೂಕು ಸಮಯವಂತು ಬರಲೇಬೇಕು. ಸಮಯವು ನಾಜೂಕಾಗಿರಲಿ ಆದರೆ ತಮ್ಮ ಸ್ವಭಾವವು ನಾಜೂಕಾಗಿ(ಕೋಮಲ) ಇರಬಾರದು. ಹಲವರ ಸ್ವಭಾವವು ಬಹಳ ಕೋಮಲವಾಗಿ ಇರುತ್ತದೆಯಲ್ಲವೆ, ಸ್ವಲ್ಪ ಶಬ್ದವಾದರೂ ಅಥವಾ ಸ್ವಲ್ಪ ಏನಾದರೂ ಆದರೂ ಬೇಸರವಾಗಿಬಿಡುತ್ತಾರೆ. ಇದಕ್ಕೇ ಕೋಮಲ ಸ್ಥಿತಿ, ಕೋಮಲ ಸ್ವಭಾವವೆಂದು ಹೇಳುವುದು ಆದ್ದರಿಂದ ಹೀಗಾಗಬಾರದು. ಸಮಯದನುಸಾರ ತಮ್ಮನ್ನು ಅದೇರೀತಿ ಹೊಂದಿಕೊಂಡು ಹೋಗಲು ಸಾಧ್ಯವಾಗಲಿ. ಇದೇ ಅಭ್ಯಾಸವು ಮುಂದೆ ನಡೆದಂತೆ ತಮಗೆ ಬಹಳ ಕೆಲಸಕ್ಕೆ ಬರುತ್ತದೆ. ಏಕೆಂದರೆ ಸಂದರ್ಭಗಳು ಸದಾ ಒಂದೇರೀತಿ ಇರುವುದಿಲ್ಲ ಹಾಗೂ ಅಂತಿಮ ಪರೀಕ್ಷೆಯೂ ಸಹ ತಮ್ಮ ನಾಜೂಕು ಸಮಯದಲ್ಲಿಯೇ ಆಗುತ್ತದೆ. ಆರಾಮವಾಗಿರುವ ಸಮಯದಲ್ಲಿ ಆಗುವುದಿಲ್ಲ ಆದ್ದರಿಂದ ಈಗಿನಿಂದ ತಾಮ್ಮೆಲ್ಲರಲ್ಲಿ ಹೊಂದಿಕೊಂಡು ನಡೆಯುವ ಶಕ್ತಿಯೆಷ್ಟಿರುತ್ತದೆಯೋ ಅಷ್ಟು ನಾಜೂಕು ಸಮಯದಲ್ಲಿ ಗೌರವಾನ್ವಿತವಾಗಿ ತೇರ್ಗಡೆಯಾಗಲು ಸಾಧ್ಯವಾಗುವುದು. ಪರೀಕ್ಷೆಯೂ ಸಹ ಬಹಳ ಸಮಯದಲ್ಲಾಗುವುದಿಲ್ಲ, ಬಹಳ ಸ್ವಲ್ಪವೇ ಸಮಯದ್ದಾಗಿರುತ್ತದೆ ಆದರೆ ನಾಲ್ಕೂಕಡೆಯ ನಾಜೂಕು ಪರಿಸ್ಥಿತಿಗಳಿರುವ ಮಧ್ಯೆ ಪರೀಕ್ಷೆ ಆಗುತ್ತದೆ ಆದ್ದರಿಂದ ತಾವು ತಮ್ಮನ್ನು ಸ್ವಭಾವದಲ್ಲಿಯೂ ಶಕ್ತಿಶಾಲಿಯನ್ನಾಗಿ ಮಾಡಿಕೊಳ್ಳಿರಿ. ಏನು ಮಾಡಲಿ ನನ್ನ ಸ್ವಭಾವವೇ ಹೀಗಿದೆ. ನನ್ನ ಹವ್ಯಾಸವೇ ಹೀಗಿದೆ ಎನ್ನಬಾರದು. ಇದಕ್ಕೇ ಕೋಮಲ ಸ್ವಭಾವ ಎಂದು ಹೇಳಲಾಗುತ್ತದೆ. ಬಾಪ್‌ದಾದಾರವರು ಸ್ಥಾಪನೆಯ ಆದಿಯಲ್ಲಿ ಎಲ್ಲದರ ಅನುಭವ ಮಾಡಿಸಿದ್ದಾರೆ. ಯಾವಾಗ ಆದಿ ಆರಂಭವಾಯಿತೋ ಆಗ ರಾಜಕುಮಾರ ಮತ್ತು ರಾಜಕುಮಾರಿಯರಿಗಿಂತಲೂ ಹೆಚ್ಚಾಗಿ ಪಾಲನೆ, ಸಾಧನಗಳು ಎಲ್ಲದರ ಅನುಭವ ಮಾಡಿಸಿದರು ಹಾಗೂ ಮುಂದೆ ನಡೆಯುತ್ತಾ ಬೆಗ್ಗರ್ ಲೈಫ್‌ನ ಪೂರ್ಣ ಅನುಭವ ಮಾಡಿಸಿದರು. ಹಾಗಾದರೆ ಯಾರು ಇವೆರಡರ ಅನುಭವ ಮಾಡಿದ್ದರೋ ಅವರಿಗೆ ಹವ್ಯಾಸವಾಗಿಬಿಟ್ಟಿತು. ಹಾಗಾದರೆ ತಮ್ಮ ಮುಂದೆ ಇಂತಹ ಸಮಯ ಬಂದಿಲ್ಲ ಆದರೆ ಬರುತ್ತದೆ. ಎಲ್ಲಿಯೇ ಇರುತ್ತೀರಿ, ಎಲ್ಲವೂ ಅಲುಗಾಡುತ್ತದೆ. ಎಲ್ಲಾ ಆಧಾರಗಳು ದೂರವಾಗುತ್ತದೆ. ಇಂತಹ ಸಮಯದಲ್ಲಿ ಏನು ಬೇಕಾಗುವುದು? ಒಬ್ಬ ತಂದೆಯ ಆಧಾರ. ತಾವಂತು ಬಹಳ-ಬಹಳ-ಬಹಳ ಅದೃಷ್ಟವಂತರಾಗಿದ್ದೀರಿ. ತಾವು ಬರುವಂತಹ ಸಮಯವು ಸಹಜ ಸಾಧನಗಳದ್ದಾಗಿದೆ. ಸಹಜ ಸಾಧನಗಳ ಜೊತೆ-ಜೊತೆ ತಮ್ಮ ಬ್ರಾಹ್ಮಣ ಜನ್ಮವಿದೆ ಆದರೆ ಸಾಧನಗಳನ್ನು ನೋಡುತ್ತಿದ್ದರೂ ಸಾಧನೆಯನ್ನು ಮರೆಯಬಾರದು ಏಕೆಂದರೆ ಕೊನೆಗೆ ಸಾಧನೆಯೇ ಉಪಯೋಗಕ್ಕೆ ಬರುತ್ತದೆ. ತಿಳಿಯಿತೇ?

ಬಾಪ್‌ದಾದಾರವರಿಗೆ ಖುಷಿ ಆಗುತ್ತಿದೆ. ಡಬಲ್ ವಿದೇಶಿಯರು ಸಂದೇಶ ಕೊಡುವುದರಲ್ಲಿ ಬಹಳ ಒಳ್ಳೆಯ ಪಾತ್ರವನ್ನು ಅಭಿನಯಿಸುತ್ತಿದ್ದಾರೆ. ಸೇವಾಕೇಂದ್ರಗಳನ್ನು ಕೂಡ ಬಹಳ ಉತ್ಸಾಹ ಉಲ್ಲಾಸಗಳಿಂದ ತೆರೆಯುತ್ತಿದ್ದಾರೆ.

ಇಂದು ನಿಮ್ಮೆಲ್ಲರಿಗೆ ಉತ್ಸವವನ್ನು ಆಚರಿಸಲು ಶುಭಾಶಯಗಳು ಮತ್ತು ಜೊತೆಜೊತೆಗೆ ಸೇವೆಗೆ ಕೂಡ ಶುಭಾಶಯಗಳು ಮತ್ತು ಅಂಡರ್ ಲೈನ್ ಕೂಡ ಮಾಡಿಸುತ್ತಿದ್ದಾರೆ ಸೇವೆ ಮತ್ತು ಸ್ವಸ್ಥಿತಿ ಎರಡರ ತೀವ್ರಗತಿಯಲ್ಲಿ ಇರಿ ಎಂದು. ಪರಿಸ್ಥಿತಿ ಮತ್ತು ಸೇವೆ ಎರಡರ ಸಮಾನತೆ ಸದಾ ಸ್ಮೃತಿಯಲ್ಲಿರಬೇಕು. ಆಗಾಗ ಬಾಪ್‌ದಾದಾ ಕೇಳಿಸಿಕೊಳ್ಳುತ್ತಿದ್ದಾರೆ ಮತ್ತು ನೋಡುತ್ತಿದ್ದಾರೆ ಕೂಡ. ಯಾವುದಾದರೂ ಸೇವೆ ಇದ್ದಾಗ ಬಹಳ ಹಾರಾಟದಿಂದ ಆ ಕಾರ್ಯವನ್ನು ಮಾಡುತ್ತಿದ್ದೀರಲ್ಲವೇ? ಕಾರ್ಯದ ಉತ್ಸಾಹದಲ್ಲಿ ಕಾರ್ಯವನ್ನು ಮಾಡುತ್ತಿದ್ದೀರಿ. ಆದರೆ ಆಗಾಗ ಕೆಲವರು ಸೇವೆಗೆ ಹೋದೆವು ಆದರಿಂದ ಸ್ಥಿತಿ ಸ್ವಲ್ಪ ಬಲಹೀನವಾಯಿತು ಎಂದು ಹೇಳುತ್ತಿದ್ದಾರೆ. ಹಾಗಬಾರದು. ಈಗ ಯೋಗದಲ್ಲಿಯೇ ಕುಳಿತುಕೊಳ್ಳುತ್ತೇವೆ ಸೇವೆಯನ್ನು ಮಾಡುವುದಿಲ್ಲ ಎಂದು ಕೂಡ ಹೇಳಬಾರದು. ಯೋಗ ಮತ್ತು ಸೇವೆ ಎರಡೂ ಜೊತೆ ಜೊತೆಗೆ ಇರಬೇಕು.

**ನಾಲ್ಕೂಕಡೆಯಲ್ಲಿರುವ ಅಮೂಲ್ಯ ವಿಶೇಷ ರತ್ನಗಳಿಗೆ, ಸದಾ ಪ್ರತಿನಿತ್ಯ ಉತ್ಸಾಹದಿಂದ ಉತ್ಸವವನ್ನು ಆಚರಿಸುವ ಶ್ರೇಷ್ಠ ಆತ್ಮರಿಗೆ, ಸದಾ ಸ್ವ-ಸ್ಥಿತಿ ಹಾಗೂ ಸೇವೆಯ ಉನ್ನತಿಯಲ್ಲಿ ಸಮತೋಲನವನ್ನಿಡುವ ಆಶೀರ್ವಾದದ ಅಧಿಕಾರಿ ಆತ್ಮರಿಗೆ, ಸದಾ ಪರಿಸ್ಥಿತಿಯನ್ನು ಸಹಜವಾಗಿ ಪಾರು ಮಾಡುವಂತಹ ಅಚಲ, ಅಡೋಲ, ಮಹಾವೀರ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 26-02-1995.

***ಸಂಗಮ ಯುಗ ಉತ್ಸವದ ಯುಗವಾಗಿದೆ, ಉತ್ಸವವನ್ನು ಆಚರಿಸುವುದು ಎಂದರೆ ಅವಿನಾಶಿ ಉತ್ಸಾಹ ಉಲ್ಲಾಸದಲ್ಲಿ ಇರುವುದಾಗಿದೆ.***

ಉತ್ಸಾಹದಲ್ಲಿ ಇರುವವರು ಅರ್ಥಾತ್ ಸದಾ ಉತ್ಸವವನ್ನು ಆಚರಿಸುವಂತಹ ಶ್ರೇಷ್ಠ ಆತ್ಮರು. ಎಂದಿಗೂ ಉತ್ಸಾಹವನ್ನು ಕಡಿಮೆ ಮಾಡಿಕೊಳ್ಳಬಾರದು. ಮುಂಚೆಯೂ ತಿಳಿಸಿದ್ದೆವು - ಬ್ರಾಹ್ಮಣ ಜೀವನದ ಶ್ವಾಸ ಉತ್ಸಾಹ ಉಲ್ಲಾಸವಾಗಿದೆ. ಒಂದು ವೇಳೆ ಉತ್ಸಾಹ ಉಲ್ಲಾಸದ ಶ್ವಾಸವಿಲ್ಲದಿದ್ದರೆ ಸೆಕೆಂಡಿನಲ್ಲಿ ಜೀವನವು ಸಮಾಪ್ತಿಯಾಗಿ ಬಿಡುತ್ತದೆ ಅಲ್ಲವೇ. ಹಾಗೆಯೇ ಬ್ರಾಹ್ಮಣ ಜೀವನದಲ್ಲಿ ಏನಾದರೂ ಉತ್ಸಾಹ ಉಲ್ಲಾಸವಿಲ್ಲದಿದ್ದರೆ, ಶ್ವಾಸವಿಲ್ಲದಿದ್ದರೆ ಬ್ರಾಹ್ಮಣ ಜೀವನವೇ ಇಲ್ಲ. ಕೆಲವರು ಮಕ್ಕಳು ನಮ್ಮೊಂದಿಗೆ ನಾವು ಚೆನ್ನಾಗಿದ್ದೇವೆ ನಾವು ಮೋಜಿನಲ್ಲಿದ್ದೇವೆ ಆದರೆ ಸಂಬಂಧ ಸಂಪರ್ಕದಲ್ಲಿ ಆಗಾಗ ಮೋಜಿನಲ್ಲಿ ಇರುತ್ತಿದ್ದೇವೆ. ಎಂದು ಹೇಳುತ್ತಿದ್ದಾರೆ ಆದರೆ ಸಂಬಂಧ ಸಂಪರ್ಕಗಳೇ ನಮ್ಮ ಸ್ಥಿತಿಗೆ ಪರೀಕ್ಷೆ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತ್ರಿಮೂರ್ತಿ ಶಿವ ತಂದೆಯೊಂದಿಗೆ ಡೈಮಂಡ್ ಜಯಂತಿಯನ್ನು ಆಚರಿಸಿಕೊಳ್ಳುವ ತಂದೆಯ ಆತ್ಮಿಕ ವಜ್ರವಾಗಿದ್ದೇನೆ.

2. ನನ್ನ ಉತ್ಸಾಹ ಉಲ್ಲಾಸಗಳು ಅವಿನಾಶಿಯಾಗಿ ಇವೆ.

3. ನಾನು ಎಂತಹ ಪರಿಸ್ಥಿತಿಗಳಲ್ಲಿ ಕೂಡ ವೈ(ಏಕೆ) ಎಂಬ ಮಾತು ಬಂದಾಗ ಫ್ಲೈ (ಹಾರಬೇಕು) ಎಂದುಕೊಂಡು ಸದಾ ಉತ್ಸಾಹ, ಉಲ್ಲಾಸಗಳಲ್ಲಿ ಇದ್ದೇನೆ.

4. ನಾನು ಅಯ್ಯೋ ಅಯ್ಯೋ ಎಂಬ ದೃಶ್ಯಗಳು ಬಂದಾಗ ವಾಹ್ ವಾಹ್ಎಂಬ ದೃಶ್ಯಗಳಲ್ಲಿ ಪರಿವರ್ತನೆ ಮಾಡಿದ್ದೇನೆ.

5. ಯಾರು ನಕಾರಾತ್ಮಕತೆಯಿಂದ ನನ್ನ ಹತ್ತಿರ ಬಂದರೂ ಸಕಾರಾತ್ಮಕತೆಯಲ್ಲಿ ಒಂದು ಕ್ಷಣದಲ್ಲಿ ಬದಲಾಯಿಸಿಬಿಟ್ಟಿದ್ದೇನೆ.

6. ನಾನು ಮನಸ್ಸಿನಿಂದ, ತನುವಿನಿಂದ, ಸಂಬಂಧ ಸಂಪರ್ಕಗಳಲ್ಲಿ ಕೂಡ ಮೋಜಿನಿಂದ ಜೀವನವನ್ನು ನಡೆಸುವ ರಾಜಯೋಗಿ ಆಗಿದ್ದೇನೆ.

7. ನಾನು ಸಂಬಂಧ ಸಂಪರ್ಕಗಳಿಂದ ನನ್ನ ಸ್ಥಿತಿಗೆ ಬರುವ ಪರೀಕ್ಷೆಗಳಲ್ಲಿ ಪಾಸ್ ವಿತ್ ಆನರ್ ಆಗಿದ್ದೇನೆ.

8. ನಾನು ಇಲ್ಲಿ(ಸಂಗಮ ಯುಗದಲ್ಲಿ) ತನು, ಮನ, ಧನ ಮತ್ತು ಸಂಬಂಧ ಸಂಪರ್ಕಗಳಿಂದ 100% ಸೇವೆ ಮಾಡಿ ಅಲ್ಲಿ(ಸತ್ಯ ಯುಗ) ಅಷ್ಟು ಸೇವಾದಾರಿಗಳನ್ನು ಪಡೆದಿದ್ದೇನೆ. (ಕರ್ಮ ಫಿಲಾಸಫಿ)

9. ನಾನು ತಂದೆಯ ಸ್ನೇಹ ಸಹಯೋಗ ಮತ್ತು ಖಜಾನೆಗಳನ್ನು ಸೇವೆಯ ಪ್ರತ್ಯಕ್ಷ ಫಲವಾಗಿ ಪಡೆದಿದ್ದೇನೆ.

10. ಸೇವೆಯಲ್ಲಿ ನನ್ನ ಎದುರಿಗೆ ಎಂತಹ ಏರುಪೇರು ಮಾಡುವ ಪರಿಸ್ಥಿತಿಗಳು ಬಂದರೂ ನಾನು ಅದು ಶಿಕ್ಷಕನಾಗಿ ಪಾಠವನ್ನು ಕಲಿಸಿದೆ ಎಂಬ ದೃಷ್ಟಿಯಿಂದ ನೋಡಿ ನಕಾರಾತ್ಮಕತೆಯನ್ನು ಸಕಾರಾತ್ಮದಲ್ಲಿ ಪರಿವರ್ತನೆ ಮಾಡಿದ್ದೇನೆ.

11. ನಾನು ತ್ರಿಕಾಲದರ್ಶಿ ಮತ್ತು ತ್ರಿನೇತ್ರಿಯಾಗಿ ಮಾಯೆಯ ಬಹುರೂಪಗಳನ್ನು ಮೊದಲೇ ತಿಳಿದುಕೊಂಡು ಅವುಗಳ ಮೇಲೆ ವಿಜಯಿಯಾಗಿದ್ದೇನೆ.

12. ನಾನು ಒಳ್ಳೆಯ ಪರಿಸ್ಥಿತಿಯಲ್ಲಿ ಆದರೂ, ಏರುಪೇರು ಮಾಡುವ ಪರಿಸ್ಥಿತಿಯಲ್ಲಾದರೂ ಸ್ವಯಂ ಹೊಂದಿಕೊಳ್ಳಬಲ್ಲೆನು.

13. ನಾನು ಸಂಘಟನೆಯಲ್ಲಿದ್ದಾಗ ಬಹಿರ್ಮುಖತೆಯಿಂದ ಅಂತರ್ಮುಖತೆಯಲ್ಲಿದ್ದು ಹೊಂದಿಕೊಂಡು ಮತ್ತೆ ಒಂಟಿಯಾಗಿದ್ದಾಗ ಕೂಡ ಹೊಂದಿಕೊಂಡು ಅರ್ಥಾತ್ ಎರಡರಲ್ಲಿ ಹೊಂದಿಕೊಳ್ಳುವ ಬ್ರಾಹ್ಮಣ ಜೀವನವನ್ನು ಕಳೆಯುತ್ತಿದ್ದೇನೆ.

14. ನಾನು ಸ್ವಸ್ಥಿತಿ ಮತ್ತು ಸೇವೆ ಎರಡರಲ್ಲಿ ತೀವ್ರಗತಿಯಲ್ಲಿದ್ದೇನೆ.

15. ನಾನು ಯೋಗ ಮತ್ತು ಸೇವೆಯನ್ನು ಜೊತೆ ಜೊತೆಗೆ ಮಾಡಿದ್ದೇನೆ.